ಇಳಿಯಲಾರದೆಂಬುದನ್ನು ಹುಟ್ಟಿದ ಎರಡನೇ ದಿನದ ಶಿಶುವಿಗೆ ಕಲಿಸಿಕೊಡುತ್ತಿದ್ದೇವೆ.

'ಎಐ' ಮೂಲದ ಯಂತ್ರಗಳ ಮುಖೇನ ಸಿನಿಮಾವೊಂದನ್ನು ನಿರ್ದೇಶಿಸುವ ಪ್ರಯತ್ನವೊಂದು ಹಾಲಿವುಡ್ಡಿನಲ್ಲಿ ಇತ್ತೀಚೆಗಷ್ಟೇ ನಡೆದಿದೆ. ಮನುಷ್ಯನ ಯಾವುದೇ ಮಧ್ಯಪ್ರವೇಶವಿಲ್ಲದೇ ಕೇವಲ ಯಂತ್ರಗಳೇ ಡೈರೆಕ್ಟ್ ಮಾಡಿದ ಆ ಚಲನಚಿತ್ರ ಇದುವರೆಗಿನ ಮಾನವ ನಿರ್ದೇಶಿತ ಅದೆಷ್ಟೋ ಸಿನಿಮಾಗಳಿಗಿಂತ ಉತ್ತಮವಾಗಿದೆಯಂತೆ. ಗ್ರಾಹಕರೊಡನೆ ನೇರವಾಗಿ ಸಮಾಲೋಚಿಸುವ ಯಂತ್ರಗಳ ನೆಗೋಶಿಯೇಷನ್ ಕಲೆಯನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಹಲವು ವರ್ಷಗಳಿಂದ ಸತತವಾಗಿ ಸಂಶೋಧನೆ ನಡೆಸುತ್ತಿದೆ 'ಫೇಸ್‌ಬುಕ್' ಕಂಪನಿ. ಈ ಪ್ರಯೋಗದ ಭಾಗವಾಗಿ, ಎರಡು ಯಂತ್ರಗಳು ತಂತಮ್ಮ ನಡುವೆ ಸಂವಹನ ಮಾಡುವಾಗ, ತಮ್ಮದೇ ಹೊಸ ಭಾಷೆಯೊಂದನ್ನು ಸೃಷ್ಟಿಸಿಕೊಂಡುಬಿಟ್ಟಿದ್ದವಂತೆ. ಅದು ಫೇಸ್‌ಬುಕ್ಕಿನ ಗಮನಕ್ಕೆ ಬಂದು, ಯಂತ್ರಗಳು ತಮ್ಮ ನಡುವೆ ಮಾತನಾಡಿಕೊಳ್ಳುವಾಗ ಬಳಸುವ ಭಾಷೆಗೆ ಕಠಿಣ ನಿಯಮ, ನಿರ್ಬಂಧಗಳನ್ನು ವಿಧಿಸಿದೆಯಂತೆ.

ಇಂದು ಯಂತ್ರಗಳು ಮನುಷ್ಯನ ಭಾವನೆಗಳನ್ನು ಅರಿಯಬಲ್ಲವು. ಅದಕ್ಕೆ ತಕ್ಕಂತೆ ಸ್ಪಂದಿಸಬಲ್ಲವು. ನಮ್ಮ ಮೂಡ್‌ಗನುಗುಣವಾಗಿ ಸಂಗೀತ ಬಿತ್ತರಿಸುವ ಪ್ಲೇಯರ್, ನಮಗೆ ಸೆಕೆಯಾಗುತ್ತಿರುವುದ ತಾನೇ ಅರಿತು ತಂಪು ಮಾಡುವ್ ಕೂಲರ್, ಇವೆಲ್ಲ ಬಹಳ ಹಳೆಯ ಸಾಧನಗಳಾದವು. ಈಗ ಬೇಕಿರುವುದು ತಾವೇ ಭಾವನೆಗಳನ್ನು ಸೂಕ್ತ ರೀತಿಯಲ್ಲಿ ಉದ್ದೀಪಿಸಿಕೊಳ್ಳಬಲ್ಲ, ಕಲ್ಪನೆಗಳನ್ನು ಸೃಷ್ಟಿಸಿಕೊಳ್ಳಬಲ್ಲ ಯಂತ್ರಗಳು. ಅವುಗಳೂ ಬಂದಮೇಲೆ ಏನಾಗಬಹುದು?

ಪಂಚತಂತ್ರದ 'ಸತ್ತಪುಲಿಯನೆತ್ತಿದ ಗಾರುಡಿಗನ ಕಥೆ'ಯೊಂದು ನನಗಿಲ್ಲಿ ನೆನಪಾಗುತ್ತಿದೆ. ಯಾವುದೇ ವಸ್ತುವಿಗೂ ಜೀವ ನೀಡಬಲ್ಲ ಅನನ್ಯ ವಿದ್ಯೆ ತಿಳಿದಿರುವ ಮಾಂತ್ರಿಕನೊಬ್ಬ ಇರುತ್ತಾನೆ. ಮೃತ ಹುಲಿಯೊಂದಕ್ಕೆ ಜೀವ ನೀಡುವಂತೆ ಆ ಊರಿನ ರಾಜ ಆತನಲ್ಲಿ ಕೋರುತ್ತಾನೆ. ಮೊದಲು ಮೂಳೆಗಳನ್ನೆಲ್ಲ ಜೋಡಿಸಿ, ನಂತರ ಮಾಂಸ ತುಂಬಿ, ಚರ್ಮವನ್ನು ಒಪ್ಪಗೊಳಿಸಿ, ಹುಲಿ ಸಿದ್ಧವಾದಮೇಲೆ, ಅದಕ್ಕೆ ಜೀವ ಕೊಡುವುದು ಒಳಿತಲ್ಲವೆನ್ನುವ ಸಲಹೆ ನೀಡುತ್ತಾನೆ ಆ ಮಾಂತ್ರಿಕ. ಅದನ್ನೊಪ್ಪದ ರಾಜ, ಪ್ರಾಣ ನೀಡಬಲ್ಲ ಆತನ ವಿದ್ಯೆಯನ್ನು ಆ ಕೂಡಲೇ ಪ್ರದರ್ಶಿಸುವ ಆದೇಶ ನೀಡುತ್ತಾನೆ. ಹಾಗೆ ಜೀವ ತಳೆದ ಹುಲಿ ರಾಜನನ್ನೂ ಮಾಂತ್ರಿಕನನ್ನೂ ತಿಂದುಹಾಕುತ್ತದೆ.

ನಾವು ಸೃಷ್ಟಿಸಿರುವ ಯಂತ್ರಗಳೂ ಕೂಡಾ ಆ 'ಫೈನಲ್ ಟಚ್'ಗಾಗಿ ಕಾಯುತ್ತಿರಬಹುದಲ್ಲವೇ?

★★★

ಈ ಭೂಮಿಯ ಮೇಲಿನ ಜೀವರಾಶಿಗಳು ಇದುವರೆಗೂ ಐದು ಬಾರಿ ಸಂಪೂರ್ಣವಾಗಿ ನಶಿಸಿಹೋಗಿ, ಪುನರ್ ನಿರ್ಮಾಣ ಹೊಂದಿವೆಯಂತೆ ಹಾಗೂ ಆರನೇ ಹಂತದ ಇಂತಹುದೇ ಒಂದು ಸಾಮೂಹಿಕ ನಾಶದ (mass extinction) ಹೊಸ್ತಿಲಲ್ಲಿ ನಾವು ನಿಂತಿದ್ದೇವೆ ಎಂಬುದು ತಜ್ಞರ ಮಾತು. ಈ ಅಳಿವು ಹಾಗೂ ಮರುಸೃಷ್ಟಿ ಎಂಬುದು ವಿಕಾಸವಾದದ ಭಾಗವೇ ಆಗಿದೆ. ಹೀಗಾಗಿ, ಮುಂಬರುವ ಮಹಾಧ್ವಂಸವನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ, ಹಿಂದಿನ ಮಹಾಧ್ವಂಸಕ್ಕೂ ಈ ಮುಂದಿನದಕ್ಕೂ ಇರುವ ವ್ಯತ್ಯಾಸವನ್ನೂ ನಾವು ಗಮನಿಸಬೇಕಷ್ಟೇ?

ಹಿಂದಿನ ಐದೂ ಅವನತಿಗಳಿಗೆ ಪ್ರಕೃತಿಯೇ ಕಾರಣವಾಗಿದೆ. ಒಮ್ಮೆ ಅಗಾಧ ಹಿಮಪಾತದಿಂದ, ಇನ್ನೊಮ್ಮೆ ಆಕಾಶಕಾಯವೊಂದು ಭೂಮಿಗೆ ಬಂದು ಅಪ್ಪಳಿಸಿದ್ದರಿಂದ, ಮತ್ತೆಂದೋ ಭಯಂಕರ ಜ್ವಾಲಾಮುಖಿ, ತೀವ್ರತರ ವಾತಾವರಣ ಬದಲಾವಣೆ ಇಂತಹ ಕಾರಣಗಳಿಗೆ ಈ ಮೊದಲು ಮಹಾಧ್ವಂಸಗಳಾಯಿತೆಂದು ಹೇಳುತ್ತದೆ ಸಂಶೋಧನೆ. ಆದರೆ, ಈ ಮುಂದೆ ಆಗುತ್ತದೆ ಎನ್ನಲಾಗುವ ವಿನಾಶಕ್ಕೆ ಮನುಷ್ಯ ಹಾಗೂ ಮನುಷ್ಯ ಮಾತ್ರ ಕಾರಣ ತಾನೆ? ಭೂಮಿಯ ಮೇಲ್ಮೈಯನ್ನೇ